## ನಿಷ್ಠೂರದನಿ

# ಮದುವೆ ಉತ್ಸವದ ಸಂಭ್ರಮ ಭವಿಷ್ಯದ ಸಂಕಟ ಆಗದಿರಲಿ

ಮದುವೆ ಮಹೋತ್ಸವ ಎಂಬುದು ಎರಡು ಮನಸ್ಸು ಹಾಗೂ ಎರಡು ಕುಟುಂಬಗಳನ್ನು ಬೆಸೆಯುವಂತಹ ತೀರಾ ಆಪ್ತವೆನ್ನಬಹುದಾದ ಒಂದು ಕಾರ್ಯಕ್ರಮ. ಎರಡು ಕುಟುಂಬಗಳ ಸಂಭ್ರಮಾಚರಣೆ ಎಂತಲೂ ಕರೆಯಬಹುದು. ನೇಮ, ಸಂಪ್ರದಾಯಗಳು ಅವರವರ ಇಚ್ಛೆಗೆ ಬಿಟ್ಟ ವಿಚಾರ. ಯಾವುದೇ ಬಗೆಯ ಸಂಗಮವನ್ನು ಶುಭವೆಂದು ಭಾವಿಸುವುದರಿಂದ ಬಂಧು–ಬಳಗ, ಸ್ನೇಹವಲಯದ ಉಪಸ್ಥಿತಿ, ಹಾರೈಕೆಗಳನ್ನು ಬಯಸುವುದು ಕೂಡ ಸಂಘಜೀವಿಯಾದ ಮನುಷ್ಯನ ಸಹಜ ಸ್ವಭಾವಕ್ಕೆ ಹೊರತಾದುದೇನೂ ಅಲ್ಲ.

ಆದರೆ, ವಿವಾಹ ವಿಧಿಯನ್ನು ವ್ಯಕ್ತಿ, ಆ ವ್ಯಕ್ತಿ ಪ್ರತಿನಿಧಿಸುವ ಕುಟುಂಬದ ಕೈಯಿಂದ ಕಸಿದುಕೊಂಡು ಬೇರೆ ಯಾರೋ ಅಥವಾ ಬೇರೆ ಯಾವುದೋ ಅವ್ಯಕ್ತ 'ಶಕ್ತಿ' ನಿರ್ದೇಶಿಸುವಂತಾದರೆ?! ಜನಸಾಮಾನ್ಯರ ವಿವೇಚನೆಯನ್ನು ನಿಶ್ಶಕ್ತಗೊಳಿಸಿದ, ಅವರನ್ನು ಅಸಹಾಯಕಗೊಳಿಸಿದ ಅಂತಹದೊಂದು ಸಾಮಾಜಿಕ ಶಕ್ತಿ ಮದುವೆಯ ಸೂತ್ರಧಾರ ಸ್ಥಾನದಲ್ಲಿ ಗಟ್ಟಿಯಾಗಿ ಕುಳಿತಿದೆ. ಅದು, ಆಡಿಸಿದಂತೆ ಆಡುವ ಸೂತ್ರದ ಗೊಂಬೆಗಳಾಗಿದ್ದಾರೆ ಬಹುಪಾಲು ವಧು–ವರ ಮತ್ತು ಅವರ ಪೋಷಕರು.

ಒಂದೆರಡು ದಿನಗಳ ಆ ಸಂಭ್ರಮವು ಭವಿಷ್ಯದ ಸಂಕಟವಾಗಿ ಬದಲಾಗಲು ಹೊರಗಿನ ಶಕ್ತಿಗಳ ಈ ಒತ್ತಡವೇ ಬಹುಮಟ್ಟಿಗೆ ಕಾರಣವಾಗಿದೆ. ಅದನ್ನು ಮೀರಲಾಗದ ಸ್ಥಿತಿಯು ಸಾಮಾಜಿಕ ಒತ್ತಡದಿಂದ ಆಗಿರಬಹುದು, ನಮ್ಮ ಸುತ್ತಲಿನ ಪರಿಸರವು ನಮಗೆ ಗೊತ್ತಿಲ್ಲದಂತೆಯೇ ನಮ್ಮೊಳಗೆ ತುಂಬಿರುವ ಪೊಳ್ಳು ಪ್ರತಿಷ್ಠೆಯಿಂದ ಆಗಿರಬಹುದು, ಸಂಪ್ರದಾಯವೋ ನಂಬಿಕೆಯೋ ಅಥವಾ ಇನ್ನಾವುದೋ ಒಂದರ ಹೆಸರಿನಲ್ಲಿ ಅದರ ಸುತ್ತ ಮೂಡಿಸಿರುವ 'ಪ್ರಭಾವಳಿ' ಆಗಿರಬಹುದು... ಇದೇ ಕಾರಣ ಎಂದು ನಿರ್ದಿಷ್ಟವಾಗಿ ಗುರುತಿಸಲಾಗದಿದ್ದರೂ ಇಂತಹ 'ಬಾಹ್ಯ' ಒತ್ತಡ–ಪ್ರೇರಣೆಗಳಿಂದ ಮದುವೆ ಎಂಬುದು ಮಧ್ಯಮ ವರ್ಗದ ಪಾಲಿಗೆ ವೇದನೆಯಾಗಿ ಮಾರ್ಪಟ್ಟಿರುವುದಂತೂ ನಿಜ.

ಎರಡು ಕುಟುಂಬಗಳ ನಡುವೆ ಹೊಸ ಸಂಬಂಧವೊಂದರ ಚಿಗುರೊಡೆಯುವಿಕೆಯನ್ನು ಸಂಭ್ರಮಿಸುವ ಈ ಖಾಸಗಿ ಕಾರ್ಯಕ್ರಮ ಈಗ ಸಾರ್ವಜನಿಕ ಕಾರ್ಯಕ್ರಮವಾಗಿದೆ. ಪ್ರತಿಷ್ಠೆಯ ಸಂಗತಿಯಾಗಿದೆ. ಬೃಹತ್ ಕಲ್ಯಾಣ ಮಂಟಪ, ಭವ್ಯ ಅಲಂಕಾರ, ವಾದ್ಯಮೇಳ, ಹಲವು ಬಗೆಯ ಖಾದ್ಯಗಳು... ಅದಕ್ಕಾಗಿ ಲಕ್ಷಾಂತರ ರೂಪಾಯಿ ಸುರಿಯಬೇಕಾದ ಸ್ಥಿತಿ ಉಂಟಾಗಿದೆ. ಉಳ್ಳವರು ಬೇಕಾದರೆ ವೈಭವದ ಮದುವೆಗಳನ್ನು ಮಾಡಿಕೊಳ್ಳಲಿ. ಅದರಿಂದ ಅವರ ಆರ್ಥಿಕ ಸ್ಥಿತಿಗತಿಯಲ್ಲಿ ಮಹತ್ತರ ಏರುಪೇರು ಆಗಲಾರದು. ಅಂತಹವರು ಆಯೋಜಿಸುವ ಆಡಂಬರದ ಮದುವೆಗಳ ಬಗೆಗಿನ ಚರ್ಚೆಯ ನೆಲೆಗಟ್ಟು ಬೇರೆ ಬಗೆಯದು. ಸಾವಿರ ರೂಪಾಯಿ ಕೈಜಾರಿದರೂ ಪೇಚಾಡಬೇಕಾದ ಸ್ಥಿತಿಯಲ್ಲಿರುವವರು ಯಾವುದೋ ಒತ್ತಡಕ್ಕೆ ಒಳಗಾಗಿ ತಾವಾಗಿಯೇ ಸಂಕಟ ಕೊರಳಿಗೆ ಸುತ್ತಿಕೊಳ್ಳುತ್ತಿದ್ದಾರೆ ನೋಡಿ, ಅದರ ಬಾಧಕ ಕರುಳು ಹಿಂಡುವಂತಹುದು. ಸಾಲ ಮಾಡಿಯೋ ಅಥವಾ ಜೀವನಪೂರ್ತಿ ದುಡಿದಿದ್ದರಲ್ಲಿ ಚೂರುಪಾರು ಉಳಿಸಿ ಕೂಡಿಟ್ಟ ಹಣವನ್ನು ಮದುವೆಗೆ ಸುರಿದು ಸಾಲಗಾರರಾಗುವ ಇಲ್ಲವೇ ಬರಿಗೈ ದಾಸರಾಗುವ ಸ್ಥಿತಿ ಮತ್ತು ಅದರಿಂದ ಭವಿಷ್ಯದ ಬದುಕಿನ ಮೇಲೆ ಆಗುವ ಪರಿಣಾಮ ಬಹಳ ದೊಡ್ಡದು. ಅದರ ತೀವ್ರತೆ ಒಂದೊಂದು ಕುಟುಂಬದ ಮೇಲೆ ಒಂದೊಂದು ರೀತಿ ಇರುತ್ತದೆ.

ಭಾರತದಲ್ಲಿ ಪ್ರತಿವರ್ಷ ಒಂದು ಕೋಟಿ ಮದುವೆಗಳು ಆಗುತ್ತವೆ ಎಂದು ಅಂದಾಜಿಸಲಾಗಿದೆ. ಈ ಉದ್ಯಮದ ವಾರ್ಷಿಕ ವಹಿವಾಟು ಸುಮಾರು ಒಂದು ಲಕ್ಷ ಕೋಟಿ ರೂಪಾಯಿ. ವಾರ್ಷಿಕ ಬೆಳವಣಿಗೆ ಪ್ರಮಾಣ ಶೇ 25ರಿಂದ 30. ವ್ಯಕ್ತಿ ಜೀವನಪೂರ್ತಿ ಕೂಡಿಟ್ಟ ಹಣದಲ್ಲಿ ಐದನೇ ಒಂದು ಭಾಗದಷ್ಟು ಮದುವೆಗೆ ವೆಚ್ಚವಾಗುತ್ತಿದೆ ಎಂಬ ಮಾತಿದೆ. ಮದುವೆ ಮಹೋತ್ಸವದಲ್ಲಿ ಎಷ್ಟು ಜನ ಪಾಲ್ಗೊಂಡಿದ್ದರು ಎಂಬುದರ ಮೇಲೆ ಆ ನಿರ್ದಿಷ್ಟ ಕುಟುಂಬದ ಸಾಮಾಜಿಕ ಸಂಬಂಧಗಳನ್ನು ಅಳೆಯಲಾಗುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ಇಂತಹ ಪೊಳ್ಳು ಪ್ರತಿಷ್ಠೆ ಮತ್ತೂ ಹೆಚ್ಚು. ಸಾಮಾಜಿಕವಾಗಿ, ರಾಜಕೀಯವಾಗಿ ಮೇಲೇರಲು ಕೆಲವರು ಈ ಮದುವೆ ಕಾರ್ಯಕ್ರಮವನ್ನು ಏಣಿಯಾಗಿ ಬಳಸುವುದೂ ಉಂಟು. ರಾಜಕಾರಣಿಗಳಿಗೆ ಮತದಾರರ ಜತೆ ಸಂಬಂಧ ಗಟ್ಟಿಗೊಳಿಸುವ ಸಾಧನವೂ ಆಗಿದೆ ಮದುವೆ. ಅದಕ್ಕಾಗಿಯೇ ಬಹುಪಾಲು ಜನಪ್ರತಿನಿಧಿಗಳು ಮದುವೆಗೆ ಹಾಜರಾಗುವುದನ್ನು ತಪ್ಪಿಸುವುದೇ ಇಲ್ಲ.

ವಿವಾಹವೆಂಬುದು ಭಾರತೀಯ ಸಮಾಜದಲ್ಲಿ ಹೀಗೆ ನಾನಾ ಆಯಾಮಗಳನ್ನು ಹೊಂದಿದೆ. ದಿನೇ ದಿನೇ ಹೆಚ್ಚು ಸಂಕೀರ್ಣಗೊಳ್ಳುತ್ತಲೇ ಇದೆ. ಸರಳ ವಿವಾಹಗಳ ಪರವಾಗಿ ಸಾಹಿತಿಗಳು, ಕಲಾವಿದರು, ಚಿಂತಕರು ಎಷ್ಟೇ ಹಿತವಚನ ಹೇಳಿದರೂ ಮತ್ತು ಆ ಹಿತವಚನದಲ್ಲಿ ಗಂಡು–ಹೆಣ್ಣು ಮತ್ತು ಅವರನ್ನು ಹೆತ್ತವರ ಹಿತ ಅಡಗಿದ್ದರೂ ಅದು ಅಪಥ್ಯವಾಗಲು ಇಂತಹ ಸಾಮಾಜಿಕ ಒತ್ತಡಗಳೇ ಬಹುಮಟ್ಟಿಗೆ ಕಾರಣ. ಮದುವೆಯು ತಿಂಗಳ ಬೆಳಕಾಗಿಯೂ ಭವಿಷ್ಯದ ಕತ್ತಲೆಯಾಗಿಯೂ ಬದಲಾಗಬಾರದೆಂದರೆ ಮೊದಲು ನಮ್ಮ ಸಮಾಜದ ಮನೋಭಾವ ಬದಲಾಗಬೇಕು.

■ ಎನ್‌. ಉದಯಕುಮಾರ್

**ಉಳ್ಳವರು ವೈಭವದ ಮದುವೆಗಳನ್ನು ಮಾಡಿಕೊಂಡರೂ, ಅದರಿಂದ ಅವರ ಆರ್ಥಿಕ ಸ್ಥಿತಿಗತಿಯಲ್ಲಿ ಮಹತ್ತರ ಏರುಪೇರು ಆಗಲಾರದು. ಸಾವಿರ ರೂಪಾಯಿ ಕೈಜಾರಿದರೂ ಪೇಚಾಡಬೇಕಾದ ಸ್ಥಿತಿಯಲ್ಲಿರುವವರು ಯಾವುದೋ ಒತ್ತಡಕ್ಕೆ ಒಳಗಾಗಿ ತಾವಾಗಿಯೇ ಸಂಕಟವನ್ನು ಕೊರಳಿಗೆ ಸುತ್ತಿಕೊಳ್ಳುವುದು ಖೇದದ ಸಂಗತಿ.**



ಈಶ್ವರ್